ಬಿಡುವ ಸಣ್ಣ ಪುಟ್ಟ ಘಟನೆಗಳ ರಸವತ್ತಾದ ನಿರೂಪಣೆ–ವರ್ಣನೆ ಗಮನ ಸೆಳೆಯುತ್ತದೆ. ಅದು ಸಹಜ ಕೂಡ. ಅದಕ್ಕೆ ದೊರಕುವ ಮನ್ನಣೆ ಕೇಳುವವರಲ್ಲಿ ಕುತೂಹಲ ಹುಟ್ಟಿಸುತ್ತದೆ. ಅದು ಹೇಳುಗನಿಗೆ ಉತ್ಸಾಹ ಮೂಡಿಸಿ, ಉತ್ತೇಜಿಸುತ್ತದೆ. ಹೀಗೆ ದೊರೆತ 'ಮನ್ನಣೆ'ಯು ಬದಲಾಗುತ್ತ, ಬೆಳೆಯುತ್ತ ಹೋಗುತ್ತದೆ. ಕೇಳುಗ ಕೇವಲ ರಿಸೀವರ್ ಮಾತ್ರ ಆಗಿ ಉಳಿಯದೆ, ಹಿಂದಿನ ಕತೆಗೆ ತನ್ನದೇ 'ಅನುಭವ'ದ ಎಳೆಗಳನ್ನು ಸೇರಿಸುತ್ತ ಹೆಣಿಗೆಯನ್ನು ಗಟ್ಟಿಗೊಳಿಸುತ್ತಾನೆ. ತೇಲಿ ಬಿಟ್ಟ ಕತೆ ಸುಳ್ಳಾಗಿರುವುದಿಲ್ಲ. ಹಾಗೆಯೂ ಪೂರ್ಣ ಸತ್ಯ ಕೂಡ ಅಲ್ಲ. ಆದರೆ, ನಂಬಬಹುದಾದ ಸಾಧ್ಯತೆಗಳನ್ನು ಒಡಲಲ್ಲಿ ಇಟ್ಟುಕೊಂಡಿರುತ್ತದೆ.

ಇದರಿಂದ ಕತೆಯಾದ ವ್ಯಕ್ತಿ–ಕವಿಯು ಸಾಂಸ್ಕೃತಿಕ ವಲಯದ ಚರ್ಚೆಯಲ್ಲಿ 'ಜೀವಂತ' ಇರುತ್ತಾನೆ. ಆದರೆ, ಅದೇ ವೇಳೆಗೆ ಅವನ ಕಾವ್ಯ ಲಘುವಾಗುವ– ಆಗಿಸುವ ಪ್ರಕ್ರಿಯೆಗೆ ಚಾಲನೆ ದೊರೆತಿರುತ್ತದೆ. ಒಟ್ಟಾರೆಯಾಗಿ ದಂತಕತೆ ಆಗುವುದಕ್ಕೆ ಕೇವಲ ವ್ಯಕ್ತಿ ಮಾತ್ರ ಕಾರಣ ಅಲ್ಲ. ಅವನ ಸಮಕಾಲೀನ ಸಮಾಜದ ಆಯ್ಕೆ–ಆದ್ಯತೆಗಳೂ ಕಾರಣವಾಗಿರುತ್ತವೆ. ಅದಕ್ಕಾಗಿಯೇ ಸಾಹಿತ್ಯಲೋಕದಲ್ಲಿ ಬರೆಸಿಕೊಂಡ ಕವಿತೆಗಿಂತ ಬರೆದ ಕವಿಯೇ, ಅಂದರೆ ಕವಿಯ ಸುತ್ತಲಿನ ಕತೆಗಳೇ ಹೆಚ್ಚು ಚಾಲ್ತಿ ಪಡೆಯುತ್ತವೆ. ಭವ್ಯ ಭಾರತದ ಸಂದರ್ಭದಲ್ಲಿ ದಂತಕತೆಗೆ ಒಳಗಾಗುವವನ ಜಾತಿ ಹಾಗೂ ಅವನು ಬೆಳದು ಬಂದ ಪ್ರದೇಶದ ಹಿನ್ನೆಲೆ ಅದರ 'ಮಹತ್ವ' ನಿರ್ಧರಿಸುತ್ತವೆ. ಅದಕ್ಕಾಗಿಯೇ ಲೆಜೆಂಡ್ ಎನ್ನುವುದು ಕೆಲವರಿಗೆ ಮಾತ್ರ ಹೆಗ್ಗಳಿಕೆ. ಹಲವರಿಗೆ ಹೀಗಳಿಕೆಯೂ ಆಗಿರುತ್ತದೆ.

ಚೆನ್ನಣ್ಣನದು ವರ್ಣರಂಜಿತ ವ್ಯಕ್ತಿತ್ವ ಎಂಬುದು ನಿರ್ವಿವಾದ. ಕೊನೆಯ ದಿನಗಳನ್ನು ಹೊರತು ಪಡಿಸಿದರೆ ಚೆನ್ನಣ್ಣನ ಭೀಮಗಾತ್ರ ಗಮನ ಸೆಳೆಯುತ್ತಿತ್ತು. ಚೆನ್ನಣ್ಣ ಎಂದರೆ ತಕ್ಷಣ ನೆನಪಿಗೆ ಬರುವುದು ಬಣ್ಣ. ಕೆಂಬಣ್ಣ. ಢಾಳಾಗಿ ಎದ್ದು ಕಾಣುವ ಕೆಂಪುಬಣ್ಣದ ಶರ್ಟ್ ಧರಿಸಿ ಕಾಣಿಸಿಕೊಳ್ಳುತ್ತಿದ್ದ ಚೆನ್ನಣ್ಣ ಅದೇ ಕಾರಣಕ್ಕಾಗಿ ತಕ್ಷಣ ಗಮನ ಸೆಳೆಯುತ್ತಿದ್ದರು. ಆದರೆ, ಅವರ ಬಣ್ಣದ ಅಂಗಿಗಳು ಕೇವಲ ಕೆಂಪುಬಣ್ಣಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಎಂಬುದು ಗಮನಾರ್ಹ, ಆದರೆ ದಾಖಲಾಗದ ಅಂಶ. ಕಡುನೀಲಿ, ಹಳದಿ ಬಣ್ಣದ ಅಂಗಿಗಳೂ ಚೆನ್ನಣ್ಣನ ಬಳಿ ಇದ್ದವು. ಅವುಗಳನ್ನವರು ಸಮಯ–ಸಂದರ್ಭ ನೋಡಿ ಬಳಸುತ್ತಿದ್ದರು. ಬೇಕಾದಾಗ ಬೇಕಾದ ಬಣ್ಣದ ಅಂಗಿ ಹಾಕಿಕೊಳ್ಳುವುದು ಅವರಿಗೆ ಗೊತ್ತಿತ್ತು. ಹಾಗೆಯೇ ಕೆಂಪಿನ ಬ್ರಾಂಡ್ ಕಳಚಿಹೋಗದ ಹಾಗೆ ಇರುವ ಎಚ್ಚರವೂ ಇತ್ತು. ಹಾಗೆಂದರೆ ಚೆನ್ನಣ್ಣ ಎಲ್ಲವನ್ನೂ ಅಳೆದು–ತೂಗಿ, ಲಾಭ–ನಷ್ಟಗಳ ಲೆಕ್ಕಾಚಾರ ಮಾಡಿ ಬದುಕುತ್ತಿದ್ದರು ಎಂದು ಭಾವಿಸಬೇಕಿಲ್ಲ. ಆಸೆಗಳಿಲ್ಲದ 'ಸಂತ'ರೂ ಆಗಿರಲಿಲ್ಲ. 'ದುರಾಸೆ'ಯ ಅತಿಯೂ ಇರಲಿಲ್ಲ. ಒಟ್ಟಾರೆ 'ಜೀವಂತ' ಮನುಷ್ಯ ಆಗಿದ್ದರು. ಅವರ ಜೀವನ ಪ್ರೀತಿ ಬದುಕು–ಬರಹ ಎರಡರಲ್ಲಿಯೂ ಹರಡಿತ್ತು. ಸರಿಸುಮಾರು ಮೂರು ದಶಕಗಳ ಹತ್ತಿರ–ದೂರದಿಂದ ನೋಡಿರುವ–ಕಂಡಿರುವ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಚೆನ್ನಣ್ಣ ಬಾಯಿ ತುಂಬ ನಗುವಿನ, ಏಚು–ಪೇಚಿಲ್ಲದ ಜೀವ.

ಗ್ರಾಮೀಣ ಪರಿಸರ–ಜಾನಪದದ ಹಿನ್ನೆಲೆಯಿಂದ ಬಂದ ಚೆನ್ನಣ್ಣ ಕುಟುಂಬ ವತ್ಸಲರು. ಅವರು ಎಲ್ಲರನ್ನೂ ಅಣ್ಣ–ತಮ್ಮ, ಅಕ್ಕ–ತಂಗಿ ಎಂಬ ಪದ ಬಳಸಿ ಸಂಬಂಧ ಗುರುತಿಸುತ್ತಿದ್ದರು. ಅದವರಿಗೆ ತೋರಿಕೆಯದಾಗಿರದೇ ಸಹಜ ನಡವಳಿಕೆಯಾಗಿತ್ತು. ಬಾಂಧವ್ಯ– ಪ್ರೀತಿ ವಿಶ್ವಾಸದ ಚೆನ್ನ+ಅಣ್ಣ 'ಓಲೆ' ತಲುಪಿಸುವ ವಾಲೀಕಾರ ಕೂಡ ಆಗಿದ್ದರು. ಯಾವುದು ಹೆಚ್ಚು? ಯಾವುದು ಕಡಿಮೆ? ಹೇಳುವುದು ಹೇಗೆ?

ಚೆನ್ನಣ್ಣನ ಹೆಬ್ಬೊತ್ತಿಗೆಗಳು ನೋಡುತ್ತಿದ್ದಂತೆಯೇ ಓದುಗನಲ್ಲಿ ಭೀತಿಯನ್ನುಂಟು ಮಾಡುತ್ತವೆ. ಅದು ಅವರ ಮಹತ್ವಾಕಾಂಕ್ಷೆಯ ಮಹಾಕಾವ್ಯ 'ವ್ಯೋಮಾವ್ಯೋಮ'ಕ್ಕೆ ಮಾತ್ರ ಸೀಮಿತವಾಗಿಲ್ಲ.